ಶ್ರೀ ಎಸ್. ಶಿವಪ್ಪ.—ಇಲ್ಲಿಯ ಆಸ್ಪತ್ರೆಯಲ್ಲಿ ಅದನ್ನು ತೆಗೆಯುವುದು ಅಸಾಧ್ಯವಾಗಿದೆ. ಅವರು ಅಪಾಯ ಸ್ಥಿತಿಯಲ್ಲಿದ್ದಾರೆ. ಆದುದರಿಂದ ಅವರಿಗೆ ವೈದ್ಯಕೀಯ ಚಿಕಿತ್ಸೆ ನಡೆಸುವುದಕ್ಕೆ ಪರದೇಶಕ್ಕೆ ಕಳಿಸುವುದಕ್ಕೆ ಏರ್ಪಾಡು ಮಾಡಲು ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೇನೂ ಅಭ್ಯಂತರವಿಲ್ಲ. ಆದರೆ ಸಧ್ಯಕ್ಕೆ ಅವರನ್ನು ಡಿಸ್ಚಾರ್ಜ್ ಮಾಡಬಾರದು ಎಂದು ವೈದ್ಯರು ಸಲಹೆ ಮಾಡಿದ್ದಾರೆ. ವೈದ್ಯಕೀಯ ಸಲಹೆ ಪ್ರಕಾರ ಮಾಡಲಾಗುವುದು.

ಶ್ರೀ ಎಚ್. ಬಿ. ಪ್ಯಾಲನಯ್ಯ.—ಮೈಸೂರಿನಲ್ಲಿರುವ ಲಲಿತ ಮಹಲನ್ನು ನೆಹರು ಲೋಕ ಯೋಜನೆ ಮಾಡಬೇಕೆಂಬುದು ಸರಕಾರದ ಯೋಚನೆಯಲ್ಲಿದೆ ಎಂಬುದು ತಿಳಿದುಬಂದಿದೆ. ಲಲಿತ ಮಹಲನ್ನು ಹೋಟೆಲ್ ಆಗಿ ಮಾಡುವುದರ ಬದಲು ಅದನ್ನು ಒಂದು ಮ್ಯೂಜಿಯಂ ಆಗಿ ಪರಿವರ್ತಿಸುವುದಕ್ಕೆ ಯೋಚನೆ ಮಾಡುತ್ತೀರಾ ?

Sri MOHAMED ALI. - The decision of the Government is to change the management of the Hotel at Lalitha Mahal Palace and the management has been taken over by the Tourist Department.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೈಸೂರು ದಸರಾ ಕಾಲದಲ್ಲಿ ಅತಿಥಿಗಳಿಗೆ ಸರಿಯಾದ ಊಟ ವಸತಿ ಸಾಕಾರ್ಯವಿಲ್ಲದೆ ತೊಂದರೆಯಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇನು ? ಇದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

Sri MOHAMED ALI.—This year about five to six lakhs of people have attended the Dasara and it was impossible for the Government to make arrangements for feeding six lakhs of people.

ಶ್ರೀ ಬಿ. ಪಿ. ಗಂಗಾಧರ.—ತುಮಕೂರು ಜಿಲ್ಲೆಯಲ್ಲಿ ಎಲ್ಲಿಯೂ ಒಂದು ಟೂರಿಸ್ಟ್ ಸೆಂಟರ್ ಇಲ್ಲ. ತುಮಕೂರು ಜಿಲ್ಲೆಯಲ್ಲಿ ದೇವರಾಯನ ದುರ್ಗವನ್ನು ಒಂದು ಟೂರಿಸ್ಟ್ ಸೆಂಟರ್ ಆಗಿ ಪರಿವರ್ತನೆಮಾಡಲು ಸರಕಾರದಲ್ಲಿ ಪ್ರಯತ್ನ ನಡೆದಿದೆಯೇ ? ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಅದನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ?

Sri MOHAMED ALI.—Already, a Tourist Rest House has been constructed there and it will be declared open soon.

Mr. DEPUTY SPEAKER.—No further supplementaries. Order, order.

ಒಬ್ಬ ಮಾನ್ಯ ಸದಸ್ಯರು.—ಲಲಿತ ಮಹಾಲನ್ನು ಒಂದು ಹೋಟೆಲ್ ಆಗಿ ಪರಿವರ್ತನೆ ಮಾಡುವುದಕ್ಕೆ ನಾಗರಿಕರಿಂದ ವಿರೋಧ ಬಂದಿರುವುದರಿಂದ ಅದನ್ನು ಒಂದು ವಿದ್ಯಾ ಸಂಸ್ಥೆಯಾಗಿ ಪರಿವರ್ತನೆ ಮಾಡಲು ಜನತೆಯಿಂದ ಏನಾದರೂ ಅರ್ಜಿ ಸರಕಾರಕ್ಕೆ ಬಂದಿದೆಯೇ ?

Sri MOHAMED ALI.—One or two persons have expressed their resentment about converting Lalitha Mahal Palace into a hotel.

Minor Irrigation Sub-Division At Shiralkoppa

22. Sri G. BASAVANNAPPA (Shikaripur).—

Will the Minister for Public Works be pleased to state.

(*a*) the stage at which the proposal for the starting of a Minor Irrigation Sub-Division at Shiralkoppa in Shimoga District stands at present ;

(*b*) the reasons for the delay in starting the same ?

A.—Sri VEERENDRA PATIL (Minister for Public Works).—

(a) There is no such proposal.

(b) Does not arise.

ಶ್ರೀ ಜಿ. ಬಸವಣ್ಣಪ್ಪ.—ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದಲ್ಲಿ ಮೈನರ್ ಇರಿಗೇಷನ್ ಸಬ್ ಡಿವಿಜನ್ ಮಾಡುವುದಕ್ಕೆ ಅಂಥ ಸಲಹೆ ಎನೂ ಇಲ್ಲ ಎಂದು ಉತ್ತರದಲ್ಲಿ ತಿಳಿಸಿದೆ. ಆದರೆ ಹತ್ತು ವರ್ಷಗಳ ಹಿಂದೆ ಶಿವಮೊಗ್ಗ ಎಗ್ಸಿಕ್ಯೂಟಿವ್ ಎಂಜಿನಿಯರ್ ಅವರು 1967ಸೆಪ್ಟಂಬರ್‌ನಲ್ಲಿ ಶಿಫಾರಸು ಮಾಡಿ ಸರಕಾರಕ್ಕೆ ತಿಳಿಸಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

†ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿರುವ ಹಾಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಚೀಫ್ ಎಂಜಿನಿಯರ್ ಅವರಿಗೆ ಈ ವಿಚಾರದಲ್ಲಿ ಕಾಗದ ಬರೆದು ತಿಳಿಸಿದ್ದಾರೆ.

ಶ್ರೀ ಜಿ ಬಸವಣ್ಣಪ್ಪ.—ಈ ಮೂರು ಹೋಬಳಿಗಳಲ್ಲಿಯಾವ ವಿಧವಾದ ನೀರಾವರಿ ಸೌಕರ್ಯ ಇಲ್ಲವೇ ಇರುವುದರಿಂದ ಹಾಗೂ ಕೆರೆಗಳಿಂದ ನೀರಾವರಿ ಮಾಡುವುದಕ್ಕೆ ಅನುಕೂಲವಿರುವುದರಿಂದ ಶಿರಾಳಕೊಪ್ಪದಲ್ಲಿ ಒಂದು ಮೈನರ್ ಇರಿಗೇಷನ್ ಸಬ್ ಡಿವಿಜನ್ ಮಾಡುವುದು ಅತ್ಯಾವಶ್ಯಕವಿದೆ ಎಂದು ಅಭಿಪ್ರಾಯ ಇರುವುದರಿಂದ ಸರಕಾರದವರು ಇದನ್ನು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಪ್ರಪೋಜಲ್ಸ್ ಕಳಿಸಿದ್ದಾರೆ. ಅದನ್ನು ಚೀಫ್ ಇಂಜಿನಿಯರ್ ಅವರು ಪರಿಶೀಲನೆ ಮಾಡಿ ವರದಿ ಕಳಿಸಿದನಂತರ ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಕಡೂರಿನಲ್ಲಿ ಮೈನರ್ ಇರಿಗೇಷನ್ ಆಫೀಸ್ 8 ವರ್ಷದಿಂದ ಕೆಲಸ ಮಾಡುತ್ತಿದೆ. ಅದನ್ನು ಈಗ ಚಿಕ್ಕಮಗಳೂರಿಗೆ ಬದಲಾಯಿಸಬೇಕೆಂಬ ಸಲಹೆ ಇದೆ ಎಂದು ಕೇಳಿದೆ. ಇದು ನಿಜವೇ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆ ಇರುವುದು ಶಿರಾಳಕೊಪ್ಪದಲ್ಲಿ ಸಣ್ಣ ನೀರಾವರಿ ಉಪ ವಿಭಾಗವೊಂದನ್ನು ಪ್ರಾರಂಭಿಸುವ ವಿಚಾರ. ಕಡೂರು ವಿಚಾರ ಕೇಳಿದರೆ ನಾನು ಹೇಗೆ ಉತ್ತರ ಹೇಳುವುದಕ್ಕೆ ಸಾಧ್ಯವಾಗುತ್ತದೆ ?

Nationalisation of Kolar Gold Mines

23. Sri H. SIDDAVEERAPPA (Harihar).—

Will the Minister for Finance and Planning be pleased to state :—

(a) when the Kolar Gold Mines were nationalised ;

(b) the period the Government of Mysore operated the Mines before they handed over to the Government of India ;

(c) the compelling reasons to hand over the Mines to the Government of India ;

(d) whether the Government are aware that Project Reports were got prepared for the working of the Mines after Nationalisation ;

(e) if so, whether the same would be placed on the table of the House ;

(f) whether they are aware that Mysore is the only State in India where gold could be traced in several Districts ;

(g) the steps they have taken for prospecting the new areas in the State ;